ಗೊತ್ತು; ನನ್ನ ಮುಂದೆ ನಿಂದು ಏನ್ನೂ ತೋರ್ಸಬೇಡ. ಏಯ್, ಕಾನ್‌ಸ್ಟೆಬಲ್ ಏನೊ ನೋಡ್ತೀಯಾ? ಇವಳ ರಟ್ಟೆ ಹಿಡಿದು ಜೀಪಿಗೆ ಹಾಕೊ... ಸ್ಟೇಶನ್‌ಗೆ ತಗೊಂಡ್ ಹೋಗಿ, ಒಳಗೆ ಹಾಕ್ಕೊಂಡು ಝಾಡಿಸಿದರೆ, ಬುದ್ಧಿಬರುತ್ತೆ.''

ಅವನ ಮಾತು ಮುಗಿದಿತ್ತೋ ಇಲ್ಲವೋ ಅವಳು ದುರ್ಗಿಯಾಗಿಬಿಟ್ಟಳು:

"ಯಾವನೋ ಅವನು ಗಂಡಸು–ನನ್ನ ರಟ್ಟೇಗೆ ಕೈ ಹಾಕೋನು? ಬರ‍್ರಲೇ! ಒಬ್ಬೊಬ್ರದ್ದೂ ಬೀಜ ಒಡದು ಬಾಯಿಗೆ ಹಾಕ್ಲಿಲ್ಲ ಅಂದರೆ, ನನ್ನ ಮಿಂಡ್ರೀಗೆ ಹುಟ್ಟಿದೋಳು ಅಂದ್ಕೊಳ್ಳಿ... ಬರ‍್ರೋ ಭೋಸುಡಿ ಮಕ್ಕಳ್ರಾ...''

ಹೀಗೆ ಹೇಳುತ್ತಲೇ, ಸೀರೆಯ ಸೆರಗನ್ನು ಸೊಂಟಕ್ಕೆ ಬಿಗಿದುಕೊಂಡು ತಾನೇ ಜೀಪಿನತ್ತ ನುಗ್ಗಿದಳು! ಅಷ್ಟರಲ್ಲಿ ಡ್ರೈವರ್‌ನು ತನ್ನ ಜೀಪನ್ನು ಸ್ಟಾರ್ಟ್ ಮಾಡಿದ. ಅದನ್ನು ತಿಳಿಯುತ್ತಲೇ ಪೇದೆಗಳಿಬ್ಬರೂ ಜೀಪಿನೊಳಕ್ಕೆ ನುಗ್ಗಿ ಸೀಟನ್ನು ಬಿಗಿಹಿಡಿದು ಕುಳಿತುಕೊಂಡರು. ಯಾವ ಮಾಯದಲ್ಲಿ ಇನ್‌ಸ್ಪೆಕ್ಟರ್ ಜೀಪನ್ನು ಹತ್ತಿ ಕುಳಿತಿದ್ದನೋ ಏನೊ ಅದು ದೂಳೆಬ್ಬಿಸಿ ಮಾಯವಾಗಿ ಹೋಯಿತು.

ಸರೋಜಮ್ಮನ ಸೊಸೆಯ ಸಿಟ್ಟು ಇನ್ನೂ ಇಳಿದಿರಲಿಲ್ಲ ಅವಳು ಪೂತ್ಕರಿಸುತ್ತಲೇ ಇದ್ದಳು:

"ಒಳಗೆ ಹಾಕಿ ಝಾಡಸ್ತಾನಂತೆ; ದೊಡ್ಡ ಗಂಡ್ಸು! ಏನ್ ಒಳಗೆ ಹಾಕೋದು ಇವ್ನು? ಮುಕ್ಳೀನಲ್ಲಿ ಮೂರು ಗ್ರಾಂ ಮಾಂಸ ಇಲ್ಲ–ಮ್ಯಾಲಿಂದ ಕಾಕೀ ಪ್ಯಾಂಟು! ಥೂ!!''

ಹೆಂಗಸರೂ, ಗಂಡಸರೂ ತಮ್ಮತಮ್ಮ ಮನೆಮಂದಿಯೊಂದಿಗೆ ಈ ದೃಶ್ಯವನ್ನು ನೋಡುತ್ತಿರುವುದು ಸರೋಜಮ್ಮನನ್ನೂ ರೇಗಿಸದೇ ಇರಲು ಸಾಧ್ಯವೇ?

"ಏನ್ರೋ? ಏನ್ ನೋಡ್ತಿರೋದು? ಆ ಕಾಕಿ ಗಂಡ್ಸು ಬಾಯಿಗೆ ಬಂದಹಾಗೆ ನನ್ನ ಸೊಸೇನ್ನ ಬೈತಾ ಇದ್ರೆ, ನೀವ್ಯಾಕೆ ಸುಮ್ನಿದ್ರಿ? ಬಾಯಿಗೇನು ಗೂಟ ಹಾಕ್ಕೊಂಡಿದ್ರ? ಮೂರ್ಸಂಜೆ ಆದ್ರೆ ಸಾಕು, ಮನೇ ಮುಂದೆ ಬಂದು, 'ಅಕ್ಕಾ ಐತಾ? ಅಕ್ಕಾ ಐತಾ?' ಅಂತ ಕೇಳ್ತಾ ನಿಂತ್ಕೋತೀರಿ? ಅವನ್ನ ಒದ್ದು ಓಡ್ಸೋದಲ್ವ? ಈಗೇನ್ ಇಲ್ಲಿ ನಿಂತು ಚಂದಾ ನೋಡ್ತೀರಿ? ಮನೀಗ್ ಹೋಗ್ರಿ.''

ಇದೆಲ್ಲಕ್ಕೂ ಸಾಕ್ಷಿಯಾಗಿ ನಿಂತಿದ್ದ ರಾಜೇಶ, ಇನ್ನೇನು, ಬೈಕನ್ನು ಶುರು ಮಾಡಬೇಕು ಅನ್ನುವಷ್ಟರಲ್ಲಿ ಸರೋಜಮ್ಮನ ಸೊಸೆಯೇ ಅವನ ಕಡೆ ದಢದಢ ನಡೆದುಬಂದು, ಅವನ ಬೈಕಿನ ಹ್ಯಾಂಡಲನ್ನು ಹಿಡಿದು ನಿಲ್ಲಿಸಿದಳು:

"ಏನೋ ರಾಜೇಶಣ್ಣಾ, ನೀವೆಲ್ಲಾ ಸೇರಿ, ಅದೇನೋ ಹೆಂಡಾ ಕುಡಿಯೋದನ್ನ ನಿಲ್ಸಾಕೆ, ಧರ್ಮಸ್ಥಳದ ಹಗ್ಡೇರನ್ನು ಕರಿಸ್ತಾ ಇದೀರಂತೆ? ತಾಳಗುಪ್ಪೇಲಿ ಕುಡಿಯಾದು ಬಿಡ್ಸೋ ಶಿಬಿರ ಮಾಡ್ತೀರಂತೆ? ವಳ್ಳೆ ಕೆಲ್ಸ ಕಣಪ್ಪಾ... ಮಾಡು ಮಾಡು... ಇವತ್ತಿಂದ ನನ್ನ ಮನೀಗೆ ಹೆಂಡಾ ಕೇಳಕೊಂಡು ಯಾವನಾದ್ರು ಬರ್ಲಿ, ಅವನ್ ಕಚ್ಚೆ ಬಿಚ್ಚಿ, ಕೈಗೆ ಕೊಟ್ಟು ಕಳ್ಸೋದು ಗ್ಯಾರಂಟಿ! ದುಡೀರೋ, ಆಮೇಲ್ ಕುಡೀರ‍್ರೊ, ಅಂದ್ರೆ ಈ ನನ್ ಮಕ್ಳು, ಬರಿ ಕುಡೀ ಕುಡೀ ಕುಡೀ... ಮೂರ್ ಕಾಸಿನ ದುಡಿಮೆ ಇಲ್ಲ!... ಅಣ್ಣಾ ರಾಜೇಶ, ಒಳ್ಳೇ ಕೆಲ್ಸಾ ಮಾಡ್ತಿದೀಯ, ಮಾಡು... ಮಾಡು. ನಿನ್ನ ಕೆಲ್ಸಕ್ಕೆ ದುಡ್ಡೂಕಾಸೂ ಬೇಕಾದ್ರೆ ಕೇಳಪ್ಪಾ, ದೇವ್ರ ಹೆಸ್ರಾಗೆ ಒಂದಿಷ್ಟು ಇಟ್ಟೀನಿ; ನಾನು ಧರ್ಮಸ್ಥಳಕ್ಕೆ ಹೋಗೋದು ಯಾವತ್ತೋಯೇನೊ... ಇಲ್ಲೇ ಕೊಟ್ಟು ಕೈಮುಗೀತೀನಿ ಹೆಗ್ಡೇರೂ ಬರ್ತಾರೆ ಅಂದ್ರೆ, ಇನ್ನೇನು ನಮ್ಮೂರಿಗೆ ದೇವ್ರೇ ಬಂದಾಂಗಾತು ಬಿಡು!''

ಇದೆಲ್ಲವೂ ತನಗೆ ಸಂಬಂಧಿಸಿದ ವಿಚಾರವೇ ಅಲ್ಲ ಎನ್ನುವಂತೆ, ಸೊಂಟಕ್ಕೆ ಕಡಂಜದ ತೈಲ ಹಚ್ಚಿಸಿಕೊಂಡು ಬಿಸಿಲಿಗೆ ಬೆನ್ನು ಒಡ್ಡಿ ಕುಳಿತಿದ್ದ ಭುಜಂಗನ ಕಡೆ ಒಮ್ಮೆ ನೋಡಿದ ರಾಜೇಶ